MOOG

# Moog Inc. Human Rights Commitment
## Companywide

| English | Translation |
|---|---|
| **PURPOSE** | **PURPOSE (ಉದ್ದೇಶ)** |
| For more than 65 years, Moog employees have enjoyed a Company Culture built on mutual trust and respect. As a Company, we are committed to a set of values that represent the highest standards of integrity and excellence. | MOOG ಸಂಸ್ಥೆಯ ನೌಕರರು 65 ವರ್ಷಗಳಿಗೂ ಮಿಗಿಲಾಗಿ, ಪರಸ್ಪರ ನಂಬಿಕೆ ಮತ್ತು ಗೌರವಗಳನ್ನು ಆಧರಿಸಿ ನಿರ್ಮಿಸಲಾದ ಸಂಸ್ಥೆಯ ಸಂಸ್ಕೃತಿಯನ್ನು ಆನಂದಿಸಿದ್ದಾರೆ. ಒಂದು ಸಂಸ್ಥೆಯಾಗಿ, ನಾವು ಕೆಲವು ಗುಂಪು ಮೌಲ್ಯಗಳಿಗೆ ಬದ್ಧರಾಗಿದ್ದು, ಅದು ಉತ್ಕೃಷ್ಟ  ಮಟ್ಟದ ಸಮಗ್ರತೆ ಮತ್ತು ಶ್ರೇಷ್ಠತೆಗಳನ್ನು ಪ್ರತಿನಿಧಿಸುತ್ತದೆ; |
| We believe it is important to maintain, protect, and promote the fundamental human rights of our employees by operating under programs and policies that support and respect human rights. We want to be a responsible corporate citizen and neighbor in all the places around the world where we do business--complying with all laws applicable to our operations around the world. | ಮಾನವ ಹಕ್ಕುಗಳನ್ನು ಬೆಂಬಲಿಸುವ ಮತ್ತು ಗೌರವಿಸುವ ಕಾರ್ಯಕ್ರಮಗಳು ಮತ್ತು ನೀತಿಗಳಡಿ ಕಾರ್ಯ ನಿರ್ವಹಿಸುವ ಮೂಲಕ ನಮ್ಮ ಉದ್ಯೋಗಿಗಳ ಮೂಲಭೂತ ಮಾನವ ಹಕ್ಕುಗಳ ಕಾಪಾಡುವಿಕೆ, ರಕ್ಷಣೆ ಮತ್ತು ಪ್ರೋತ್ಸಾಹ ಬಹಳ ಮುಖ್ಯ ಎಂಬುದನ್ನು ನಾವು ನಂಬಿದ್ದೇವೆ.  ವಿಶ್ವದಾದ್ಯಂತ ನಮ್ಮ ಕಾರ್ಯನಿರ್ವಹಣೆಗೆ ಅನ್ವಯಿಸುವ ಎಲ್ಲ ಕಾನೂನುಗಳನ್ನು ಅನುಸರಿಸುವ ಮೂಲಕ -  ವಿಶ್ವದಾದ್ಯಂತ ನಾವು ವ್ಯವಹರಿಸುವ ಎಲ್ಲ ಸ್ಥಳಗಳಲ್ಲಿ ನಾವು ಜವಾಬ್ದಾರಿಯುತ ಕಾರ್ಪೊರೇಟ್ ನಾಗರೀಕರಾಗಿರಲು ಮತ್ತು ನೆರೆಯವರಾಗಿರಲು ಬಯಸುತ್ತೇವೆ; |
| Our Human Rights Commitment applies to Moog Inc., the entities and subsidiaries that we own, and the entities in which we hold a majority interest. We are committed to: | MOOG INC., ನಮ್ಮ ಮಾಲೀಕತ್ವದ ಎಲ್ಲ ಘಟಕಗಳು ಮತ್ತು ಅಂಗ ಸಂಸ್ಥೆಗಳು, ಮತ್ತು ನಾವು  ಬಹುಪಾಲು ಆಸಕ್ತಿ ಹೊಂದಿರುವ ಘಟಕಗಳಿಗೆ ಮಾನವ ಹಕ್ಕುಗಳ ನಮ್ಮ ಬಾಧ್ಯತೆ ಅನ್ವಯಿಸುತ್ತದೆ.  ನಾವು ಕೆಳಕಂಡ ಅಂಶಗಳಿಗೆ ಬದ್ಧರಾಗಿದ್ದೇವೆ: |
| • Prohibiting forced labor and human trafficking; | • ಬಲವಂತದ ದುಡಿಮೆ ಮತ್ತು  ಮಾನವ  ಸಾಗಾಣಿಕೆಗಳ ನಿಷೇಧ; |
| • Prohibiting child labor; | • ಬಾಲ ಕಾರ್ಮಿಕ ಪದ್ಧತಿ ನಿಷೇಧ; |
| • Promoting diversity and inclusion; | • ವಿವಿಧತೆ ಮತ್ತು ಒಳಗೊಳ್ಳುವಿಕೆಗಳಿಗೆ ಪ್ರೋತ್ಸಾಹ |
| • Promoting a workplace that is free of harassment and discrimination; | • ಕಿರುಕುಳ ಮತ್ತು ತಾರತಮ್ಯ ರಹಿತವಾದ  ಕಾರ್ಯಕ್ಷೇತ್ರಕ್ಕೆ ಪ್ರೋತ್ಸಾಹ; |
| • Providing fair and equitable wages, benefits, and other conditions of employment in accordance with local laws; | • ನ್ಯಾಯೋಚಿತ ಮತ್ತು ಸಮಾನ ವೇತನ, ಲಾಭಗಳು, ಮತ್ತು ಸ್ಥಳೀಯ ಕಾನೂನು ರೀತ್ಯಾ ನೇಮಕಾತಿ ನಿಬಂಧನೆಗಳನ್ನು ನೀಡಲು; |
| • Providing safe and humane working conditions; | • ಕರ್ತವ್ಯ ನಿರ್ವಹಣೆಗೆ ಸುರಕ್ಷಿತ ಹಾಗೂ ಮಾನವೀಯ ಸ್ಥಿತಿಗತಿಗಳನ್ನು ನೀಡಲು; |
| • Recognizing employees' rights to freedom of association and collective bargaining; and | • ಉದ್ಯೋಗಿಗಳ  ಸಂಘಟನೆಗೆ ಮತ್ತು ಸಾಮೂಹಿಕ ಹಿತಾಸಕ್ತಿಗಳ ಸ್ವಾತಂತ್ರ್ಯದ ಹಕ್ಕುಗಳ ಗುರುತಿಸುವಿಕೆ;  ಮತ್ತು |

MOOG

# Moog Inc. Human Rights Commitment
## Companywide

| English | Translation |
|---|---|
| • Ensuring that employees understand and comply with our Ethics Policy. | • ಉದ್ಯೋಗಿಗಳು ನಮ್ಮ ನೀತಿ ಶಾಸ್ತ್ರಗಳನ್ನು ಅರಿತಿದ್ದಾರೆ ಮತ್ತು ಅನುಸರಿಸುತ್ತಿದ್ದಾರೆಂಬುದನ್ನು ಖಾತ್ರಿಪಡಿಸಿಕೊಳ್ಳಲು; |
| We expect our business partners to follow responsible workplace practices and to uphold the principles of Moog's Human Rights Commitment. Third party providers are required to follow the scope of work and the terms set forth in their contracts, which further outline our Commitment. | • ನಮ್ಮ ವ್ಯಾವಹಾರಿಕ ಪಾಲುದಾರರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಣಾ ಅಭ್ಯಾಸಗಳನ್ನು ಅನುಸರಿಸಬೇಕೆಂದು ಮತ್ತು MOOG ನ ಮಾನವ ಹಕ್ಕು ನೀತಿಗಳ ಬದ್ಧತೆಯನ್ನು ಎತ್ತಿ ಹಿಡಿಯಬೇಕೆಂದು ನಾವು ಬಯಸುತ್ತೇವೆ. ಮೂರನೇ ವ್ಯಕ್ತಿಗಳ ಸೇವೆ ಒದಗಿಸುವವರು ಅವರಿಗೆ ನಿಗದಿಪಡಿಸಲಾದ ಕೆಲಸದ ವ್ಯಾಪ್ತಿ ಮತ್ತು ಗುತ್ತಿಗೆ ಒಪ್ಪಂದಗಳ ನಿಯಮ, ನಿಬಂಧನೆಗಳಿಗಳನ್ನು ಪಾಲಿಸಬೇಕಾದುದು ಅವಶ್ಯಕ, ಇವು ನಮ್ಮ ಬದ್ಧತೆಗಳಿಗೆ ಮತ್ತಷ್ಟು ಒತ್ತು ನೀಡುತ್ತವೆ; |
| **FORCED LABOR AND HUMAN TRAFFICKING** | **ಬಲವಂತದ ದುಡಿಮೆ ಮತ್ತು ಮಾನವ ಸಾಗಾಣಿಕೆ** |
| We prohibit the use of all forms of forced labor, including prison labor, indentured labor, bonded labor, military labor, slave labor, and any form of human trafficking. No use of physical punishment or threats of violence or other forms of physical, sexual, psychological, or verbal abuse as method of discipline or control will be tolerated in Company workplaces. | ಜೈಲು ಕಾರ್ಮಿಕರು, ಅಕ್ರಮ ಕರಾರಿನ ಕಾರ್ಮಿಕರು, ಬಂಧಿತ ಕಾರ್ಮಿಕರು, ಜೀತದಾಳು ಕಾರ್ಮಿಕರು, ಮಿಲಿಟರಿ ಕಾರ್ಮಿಕರು, ಗುಲಾಮಿ ಕಾರ್ಮಿಕರೂ, ಸೇರಿದಂತೆ ಯಾವುದೇ ಬಲವಂತದ ಬಂಧಿತ ಕಾರ್ಮಿಕರ ಬಳಕೆ ಮತ್ತು ಯಾವುದೇ ರೀತಿಯ ಮಾನವ ಸಾಗಾಣಿಕೆಗಳನ್ನು ನಿಷೇದಿಸಿದ್ದೇವೆ. ದೈಹಿಕ ಶಿಕ್ಷೆ ಅಥವಾ ಹಿಂಸಾತ್ಮಕ ಬೆದರಿಕೆಗಳು ಅಥವಾ ಇನ್ನಾವುದೇ ರೀತಿಯ ದೈಹಿಕ, ಲೈಂಗಿಕ, ಮಾನಸಿಕ, ಅಥವಾ ಮೌಖಿಕ ನಿಂದನೆ, ಮುಂತಾದ ಯಾವುದೇ ಶಿಸ್ತಿನ ಕ್ರಮಗಳಾಗಲೀ ಅಥವಾ ನಿಯಂತ್ರಣಾ ವಿಧಗಳನ್ನಾಗಲೀ ಸಂಸ್ಥೆಯ ಕಾರ್ಯಕ್ಷೇತ್ರದಲ್ಲಿ ಬಳಸುವುದನ್ನು ಸಹಿಸಲಾಗುವುದಿಲ್ಲ; |
| Additionally, we are committed to ensuring that employees and suppliers take appropriate steps to mitigate the risk of human trafficking and modern slavery from occurring in any aspect of our global operations and supply chain. See our published Policy Statement and Anti-Human Trafficking Disclosure Statement for additional information. | ಇದಕ್ಕೆ ಪೂರಕವಾಗಿ, ನಮ್ಮ ಉದ್ಯೋಗಿಗಳು ಮತ್ತು ಸರಬರಾಜುದಾರರು ನಮ್ಮ ಜಾಗತಿಕ ಕಾರ್ಯಾಚರಣೆ ಮತ್ತು ಸರಬರಾಜು ಸರಪಣಿಗಳಲ್ಲಿ ಯಾವುದೇ ಮಾನವ ಸಾಗಾಣಿಕೆ, ಮತ್ತು ನವೀನ ಜೀತ ಪದ್ಧತಿಗಳ ಅಪಾಯಗಳು ಉಂಟಾಗುವುದನ್ನು ತಗ್ಗಿಸಲು ಸೂಕ್ತ ಕ್ರಮಗಳನ್ನು ಕೈಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ; |
| **Child Labor** | **ಬಾಲ ಕಾರ್ಮಿಕರು** |
| We prohibit the hiring of individuals under the age of eighteen (18) or the local legal minimum working age. Younger workers may be employed through Company approved, short-term internships, co- | ಹದಿನೆಂಟು (18) ವರ್ಷದ ಒಳಗಿನ ವ್ಯಕ್ತಿಗಳ ಅಥವಾ ಸ್ಥಳೀಯ ನೇಮಕಾತಿ ಕನಿಷ್ಠ ವಯೋಮಿತಿಯೊಳಗಿನ ವ್ಯಕ್ತಿಗಳ ನೇಮಕಾತಿಯನ್ನು ನಾವು ನಿಷೇಧಿಸಿದ್ದೇವೆ. |

MOOG

# Moog Inc. Human Rights Commitment
## Companywide

| English | Translation |
| --- | --- |
| ops, apprenticeships, or work experience programs, but they are never permitted to do work that may threaten their health and safety or hinder their education or vocational orientation and training. Terms of employment must comply with applicable laws and regulations and employment relationships are voluntary. | ಚಿಕ್ಕ ವಯಸ್ಸಿನ ಉದ್ಯೋಗಿಗಳನ್ನು ಸಂಸ್ಥೆಯು ಅನುಮೋದಿಸಿದ, ಇಂಟರ್ನ್ ಶಿಪ್ ಗಳು, ಕೂಪ್ಸ್, ಅಪ್ರೆಂಟಿಸ್ ಶಿಪ್ ಗಳಡಿಯಲ್ಲಿ ನೇಮಿಸಿಕೊಳ್ಳಬಹುದಾಗಿದ್ದು, ಆದರೆ, ಅವರ ಆರೋಗ್ಯ ಮತ್ತು ಸುರಕ್ಷತೆಗೆ ಅಪಾಯವಿರುವ ಅಥವಾ ಅವರ ವಿದ್ಯಾಭ್ಯಾಸಕ್ಕೆ, ವೃತ್ತಿಪರ ಕೌಶಲ್ಯ ಮತ್ತು ತರಬೇತಿ, ಅಥವಾ ಕೆಲಸದ ಅನುಭವ ನೀಡುವ ಕಾರ್ಯಕ್ರಮಗಳಿಗೆ ಅಡ್ಡಿಯಾಗುವಂತಹ ಯಾವುದೇ ಕೆಲಸಗಳನ್ನು ಮಾಡಲು ಅವರಿಗೆ ಎಂದಿಗೂ ಅನುಮತಿ ಇರುವುದಿಲ್ಲ. ನೇಮಕಾತಿಯ ನಿಯಮ, ನಿಬಂಧನೆಗಳು ಅನ್ವಯಿತ ಕಾನೂನು ಮತ್ತು ನಿಯಮಗಳಿಗೆ ಅನುಸಾರವಾಗಿದ್ದು ಮತ್ತು ನೇಮಕಾತಿ ಸಂಬಂಧಗಳು ಸ್ವಯಂಪ್ರೇರಿತವಾಗಿರುತ್ತವೆ; |
| **DIVERSITY AND INCLUSION** | **ವೈವಿಧ್ಯತೆ ಮತ್ತು ಒಗ್ಗೂಡಿಸುವಿಕೆ** |
| We are actively committed to promoting diversity throughout our Company to foster an inclusive workplace that aligns with our strategy and culture. | ನಮ್ಮ ತಂತ್ರಗಾರಿಕೆ ಮತ್ತು ಸಂಸ್ಕೃತಿಗೆ ಹೊಂದುವಂತಹ ಒಗ್ಗೂಡಿಸುವಿಕೆಯ ಕಾರ್ಯಕ್ಷೇತ್ರವನ್ನು ಪೋಷಿಸಲು ನಾವು ನಮ್ಮ ಸಂಸ್ಥೆಯ ಉದ್ದಗಲಕ್ಕೂ ವೈವಿಧ್ಯತೆಯನ್ನು ಉತ್ತೇಜಿಸಲು ಸಕ್ರಿಯವಾಗಿ ಬದ್ಧರಾಗಿದ್ದೇವೆ. |
| **NON-DISCRIMINATION AND HARASSMENT** | ತಾರತಮ್ಯತೆ-ರಹಿತ ಮತ್ತು ಶೋಷಣಾ-ರಹಿತ |
| We prohibit any type of discrimination or harassment based on age, race, sex, color, national origin, religion, gender identity, disability, sexual orientation, pregnancy status, or any other status protected by applicable law. Furthermore, the basis of recruitment, hiring, placement, training, compensation, and advancement at Moog is qualifications, skills, experience, and performance. We value the diversity and unique contributions of our employees and have a long-standing commitment to equal opportunity and intolerance of discrimination and harassment. | ಅನ್ವಯಿತ ಕಾನೂನಿನಡಿಯಲ್ಲಿ ರಕ್ಷಿತವಾಗಿರುವ ವಯಸ್ಸು, ಬುಡಕಟ್ಟು, ಲಿಂಗ, ವರ್ಣ, ರಾಷ್ಟ್ರೀಯ ಮೂಲ, ಧರ್ಮ, ಲಿಂಗ ಗುರುತು, ಅಂಗವೈಕಲ್ಯತೆ, ಲೈಂಗಿಕ ದೃಷ್ಟಿಕೋನ, ಗರ್ಭಧಾರಣೆ ಸ್ಥಿತಿ, ಅಥವಾ ಇನ್ನಾವುದೇ ಸ್ಥಿತಿಗಳ ಆಧಾರಿತವಾದ ಯಾವುದೇ ರೀತಿಯ ತಾರತಮ್ಯತೆ ಅಥವಾ ಶೋಷಣೆಗಳನ್ನು ನಾವು ನಿಷೇಧಿಸುತ್ತೇವೆ. ಇದಲ್ಲದೆ, MOOG ಸಂಸ್ಥೆಯಲ್ಲಿನ ನೇಮಕಾತಿ, ಉದ್ಯೋಗ, ನಿಯೋಜನೆ, ತರಬೇತಿ, ಪರಿಹಾರ, ಮತ್ತು ಮುಂಗಡ ಪಾವತಿಗಳಿಗೆ ಆಧಾರವೆಂದರೆ, ಅವು, ವಿದ್ಯಾರ್ಹತೆ, ಕೌಶಲ್ಯಗಳು, ಅನುಭವ, ಮತ್ತು ಕಾರ್ಯಕ್ಷಮತೆಗಳು. ನಾವು ನಮ್ಮ ಉದ್ಯೋಗಿಗಳ ವೈವಿಧ್ಯತೆ ಮತ್ತು ಅನನ್ಯ ಕೊಡುಗೆಗಳಿಗೆ ಬೆಲೆ ಕೊಡುತ್ತೇವೆ ಮತ್ತು ಸಮಾನ ಅವಕಾಶ ಮತ್ತು ತಾರತಮ್ಯತೆ ಮತ್ತು ಶೋಷಣೆಗಳ ಅಸಹೀಷ್ಣುತೆಗೆ ದೀರ್ಘಕಾಲಿಕ ಬದ್ಧತೆಯನ್ನು ಹೊಂದಿದ್ದೇವೆ; |
| **HEALTHY, SAFE, AND HUMANE WORKING CONDITIONS** | **ಆರೋಗ್ಯಕರ, ಸುರಕ್ಷಿತ, ಮತ್ತು ಮಾನವೀಯ ಕಾರ್ಯಸ್ಥಿತಿಗತಿಗಳು** |

MOOG

# Moog Inc. Human Rights Commitment
## Companywide

| English | Translation |
|---|---|
| We provide and maintain a safe and healthy workplace and comply with applicable safety and health laws, regulations, and internal requirements. We are dedicated to ensuring our workplaces are safe by minimizing the risk of accidents, injury, and exposure to health risks. We are committed to engaging with our employees to improve health and safety in our workplaces, including the identification of hazards and remediation of health and safety issues. | ಅನ್ವಯಿತ ಸುರಕ್ಷತಾ ಮತ್ತು ಆರೋಗ್ಯ ಸಂಬಂಧಿ ಕಾನೂನು ಹಾಗೂ ನಿಯಮಗಳಿಗೆ ಮತ್ತು ಆಂತರಿಕ ಅಗತ್ಯತೆಗಳಿಗೆ ಅನುಸಾರವಾಗಿ ನಾವು ಸುರಕ್ಷಿತ ಮತ್ತು ಆರೋಗ್ಯಕರ ಕಾರ್ಯಸ್ಥಳವನ್ನು ನೀಡುತ್ತೇವೆ ಮತ್ತು ಕಾಪಾಡಿಕೊಳ್ಳುತ್ತೇವೆ. ಅಪಘಾತಗಳು, ಗಾಯಗಳು ಮತ್ತು ಆರೋಗ್ಯಕ್ಕೆ ಮಾರಕವಾದ ಅಪಾಯಗಳನ್ನು ತಗ್ಗಿಸುವ ಮೂಲಕ, ನಮ್ಮ ಕಾರ್ಯಸ್ಥಳಗಳು ಸುರಕ್ಷಿತವಾಗಿವೆ ಎಂಬುದನ್ನು  ಖಾತ್ರಿಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ. ಅಪಾಯಗಳನ್ನು ಗುರುತಿಸುವ ಮೂಲಕ ಮತ್ತು ಆರೋಗ್ಯ ಮತ್ತು ಸುರಕ್ಷತೆಗಳ ಸಮಸ್ಯೆಗಳ  ಗುರುತಿಸುವಿಕೆಯೂ ಸೇರಿದಂತೆ, ನಮ್ಮ ಕಾರ್ಯಸ್ಥಳಗಳಲ್ಲಿ ಆರೋಗ್ಯ ಮತ್ತು ಸುರಕ್ಷತೆಗಳನ್ನು ಸುಧಾರಿಸಲು ನಮ್ಮ ಉದ್ಯೋಗಿಗಳೊಂದಿಗೆ ತೊಡಗಿಕೊಳ್ಳಲು ನಾವು ಬದ್ಧರಾಗಿದ್ದೇವೆ; |
| We aim to minimize the use of natural resources, maximizing efficiency when designing and producing our products, and we promote a culture of well-being. | **ನಾವು ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡುವ ಗುರಿ ಹೊಂದಿದ್ದೇವೆ, ನಮ್ಮ ಉತ್ಪನ್ನಗಳ ವಿನ್ಯಾಸ ಮತ್ತು  ಉತ್ಪಾದನಾ ದಕ್ಷತೆಯನ್ನು ಹೆಚ್ಚಿಸಿಕೊಳ್ಳುತ್ತೇವೆ, ಹಾಗೂ ನಾವು ಎಲ್ಲರ ಯೋಗಕ್ಷೇಮ ಬಯಸುವ ಸಂಸ್ಕೃತಿಯನ್ನು ಉತ್ತೇಜಿಸುತ್ತೇವೆ;** |
| We strive to provide and maintain a workplace that is free from violence, harassment, intimidation, and other unsafe conditions due to internal and external threats. | ಆಂತರಿಕ ಹಾಗೂ ಬಾಹ್ಯ ಬೆದರಿಕೆಗಳ ಕಾರಣದಿಂದ ಉಂಟಾಗುವ ಹಿಂಸೆ, ಶೋಷಣೆ, ಬೆದರಿಕೆ,  ಮತ್ತು ಇತರೆ ಅಸುರಕ್ಷಿತ  ಸ್ಥಿತಿ ಗತಿ - ಇವುಗಳಿಂದ ಹೊರತಾದ ಕಾರ್ಯಸ್ಥಳವನ್ನು ನೀಡಲು ಮತ್ತು ಕಾಪಾಡಲು ನಾವು ಶ್ರಮಿಸುತ್ತೇವೆ; |
| **FREEDOM OF ASSOCIATION AND COLLECTIVE BARGAINING** | ಸಂಘ ಮತ್ತು ಸಾಮೂಹಿಕ ಹಿತಾಸಕ್ತಿಗಳ  ಸ್ವಾತಂತ್ರ್ಯ |
| We respect our employees' right to join, form, or not to join a labor union without fear of retaliation, intimidation, or harassment. We are committed to establishing a constructive dialogue with employees' freely chosen representatives and we are committed to bargaining in good faith with such representatives.<br>Specific to United States Federal law and the National Labor Relations Act in the U.S., employees have the right to form, join or assist a labor organization. | ಪ್ರತೀಕಾರ, ಬೆದರಿಕೆ, ಅಥವಾ ಶೋಷಣೆಗಳ ಹೆದರಿಕೆಯಿಲ್ಲದೆ ಯಾವುದೇ ಕಾರ್ಮಿಕ ಸಂಘಟನೆಗಳನ್ನು ಸೇರುವ, ಸ್ಥಾಪಿಸುವ, ಅಥವಾ ಸೇರದಿರುವ ನಮ್ಮ ಉದ್ಯೋಗಿಗಳ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನಾವು ಗೌರವಿಸುತ್ತೇವೆ. ಉದ್ಯೋಗಿಗಳು ಮುಕ್ತವಾಗಿ ಆರಿಸುವ ಪ್ರತಿನಿಧಿಗಳೊಂದಿಗೆ ರಚನಾತ್ಮಕವಾದ ಮಾತುಕತೆಗಳನ್ನು ನಡೆಸಲು ನಾವು ಬದ್ಧರಾಗಿದ್ದೇವೆ ಮತ್ತು ನಾವು ಅಂತಹ ಪ್ರತಿನಿಧಿಗಳೊಂದಿಗೆ ಉತ್ತಮ ನಂಬಿಕೆಯೊಂದಿಗೆ  ಸಮಾಲೋಚನೆ ನಡೆಸಲು ಬದ್ಧರಾಗಿದ್ದೇವೆ;<br>ನಿರ್ದಿಷ್ಟವಾಗಿ ಅಮೇರಿಕ ಸಂಯುಕ್ತ ಸಂಸ್ಥಾನದ ಫೆಡರೆಲ್ ಕಾನೂನು ಮತ್ತು ಅಮೇರಿಕಾದಲ್ಲಿನ ರಾಷ್ಟ್ರೀಯ ಕಾರ್ಮಿಕ ಸಂಬಂಧಗಳ ಕಾಯ್ದೆಗಳಿಗೆ |

MOOG

# Moog Inc. Human Rights Commitment
## Companywide

| English | Translation |
|---|---|
| | ಅನುಗುಣವಾಗುವಂತೆ, ಉದ್ಯೋಗಿಗಳು ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸಲು, ಸೇರಲು ಅಥವಾ ಕಾರ್ಮಿಕ ಸಂಘಟನೆಗಳಿಗೆ ಸಹಾಯ ಮಾಡುವ ಹಕ್ಕನ್ನು ಹೊಂದಿದ್ದಾರೆ; |
| ***NOTE:*** <br> ***Under the Act, employees also have the right not to belong to a union.*** | **ಗಮನಿಸಿ:** <br><br> **ಈ ಕಾಯ್ದೆಯಡಿ, ಯಾವುದೇ ಸಂಘಟನೆಗೆ ಸೇರದೇ ಇರುವ ಹಕ್ಕನ್ನು ಉದ್ಯೋಗಿಗಳು ಹೊಂದಿದ್ದಾರೆ.** |
| **PROMOTE ETHICAL BEHAVIOR WITH GUIDANCE AND TRAINING** | ಮಾರ್ಗದರ್ಶನ ಮತ್ತು ತರಬೇತಿಯೊಂದಿಗೆ ನೈತಿಕ ನಡವಳಿಕೆಗೆ ಉತ್ತೇಜನ |
| We require that employees complete biannual business ethics training that provides clear guidance on specific situations employees may face and directs them where to go when they have questions or concerns—without fear of retaliation. See our published Statement of Business Ethics for additional information. <br> ## | ಉದ್ಯೋಗಿಗಳು ವ್ಯಾವಹಾರಿಕ ನೈತಿಕ ತರಬೇತಿಯನ್ನು ದ್ವೈವಾರ್ಷಿಕವಾಗಿ ಪೂರ್ಣಗೊಳಿಸಬೇಕಿದ್ದು, ಅದು ಉದ್ಯೋಗಿಗಳಿಗೆ ಎದುರಾಗಬಹುದಾದ ನಿರ್ದಿಷ್ಟ ಪರಿಸ್ಥಿತಿಗಳ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನ ನೀಡುತ್ತದೆ ಮತ್ತು ಅವರಲ್ಲಿ ಪ್ರಶ್ನೆಗಳು ಅಥವಾ ಕಾಳಜಿಗಳಿದ್ದಲ್ಲಿ - ಪ್ರತೀಕಾರದ ಹೆದರಿಕೆಯಿಲ್ಲದೆ, ಎಲ್ಲಿ ಹೋಗಬೇಕೆಂಬ ಬಗ್ಗೆ ನಿರ್ದೇಶನ ನೀಡುತ್ತದೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ಪ್ರಕಟಣೆಯಾದ Statement of Business Ethics ನೋಡಿ. |